12. ಸ್ ೧೯೦೯–೧೦ನೆ ಸಾಲಿಗೆ ಮಂಜೂರಾದ ಡಿಸ್ಟ್ರಿಕ್ಟ್ ಫಂಡ್ಸ್ ಕಾವುಗಾರಿಗಳ ಅಂದಾಜಗಳು.

ಡಿಸ್ಟ್ರಿಕ್ಟ್ ಬೋರ್ಡಿನ ಮತ್ತೊಂದು ವಿಾಟಿಂಗಿನ ಪರಿಯಂತರ ಈ ಅಂದಾಜುಗಳು ನಿಲ್ಲಬಹುದೆಂದು ತೀರ್ಮಾನಿಸಲಾಯಿತು.

13. ಬೆಂಗಳೂರು ತಾಲ್ಲೂಕು ಚಿಕ್ಕಬಾಣಾವಾರದಲ್ಲಿರುವ ರೆವಿನ್ಯೂ ಚಾವಡಿಯನ್ನು 25 ರೂಪಾಯಿಗೆ ರಿಪೇರಿ ಮಾಡಲು ಬೆಂಗಳೂರು ತಾಲ್ಲೂಕು ಅಮಲ್ದಾರ್ರ 30—6—09ನೆ ಮುಕ್ಕಂ 233ನೆ ನಂಬರು ಇತ್ತಿಲ್ಲೆಯೊಡನೆ ಬಂದ ಅಂದಾಜು ಓದಲಾಯಿತು.

ಮಂಜೂರ್ಮಾಡಲಾಯಿತು.

14. ಬೆಂಗಳೂರು ತಾಲ್ಲೂಕು ಸಾರಕ್ಕಿ ರಸ್ತೆಗೆ ಅಡ್ಡವಾಗಿ ಬರುವ ಹೊಹರಿಯನ್ನು ಕಟ್ಟುತಕ್ಕ ವಿಷಯದಲ್ಲಿ ಅಮಲ್ದಾರ್ರ 30—6—09ನೆ ಮುಕ್ಕಂ 225ನೆ ನಂಬರು ರಿಪೋರ್ಟನೊಡನೆ ಬಂದ ರಿವೈಜ್ ಅಂದಾಜು.

ರಿವೈಜ್ ಅಂದಾಜು ಮಂಜೂರು ಮಾಡಬಹುದೆಂದು ತೀರ್ಮಾನಿಸಲಾಯಿತು.

15. ಹೆಸರುಘಟ್ಟ ಹುಲ್ಲುಕಾವಲಿನಲ್ಲಿ ತೊಂಡು ದೊಡ್ಡಿಗಳನ್ನು ಕಟ್ಟುತಕ್ಕ ವಿಷಯದಲ್ಲಿ ಬೋರ್ಡಿನ ತೀರ್ಮಾನ ಕೇಳಿ ಬಂದ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ 3—8—09ನೆ ಮುಕ್ಕಂ 1283—29–09–2ನೆ ನಂಬರು ಡಾಕೆಟ್ ಓದಲಾಯಿತು.

ಜಾಸ್ತಿಯಾಗಿ ಎರಡು ತೊಂಡು ದೊಡ್ಡಿಗಳನ್ನು ಮಂಜೂರ್ಮಾಡಬಹುದೆಂದು ತೀರ್ಮಾನಿಸಲಾಯಿತು.

16. ಆನೇಕಲ ತಾಲ್ಲೂಕು ಚಂಡಾಪುರದ ಸಂತೆಗೆ ಖರತಕ್ಕ ಜಿನಸಿ ವಗೈರೆ ಮೇಲೆ ಕಮ್ಮಿ ದರದ ರುಸುಂ ವಸೂಲು ಮಾಡತಕ್ಕ ಬಾಬೆ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿ ಸಾಹೇಬರವರ 27—5—09ನೆ ಮುಕ್ಕಂ 11862—ಲೋ. ಜೋ. 336-07-4ನೆ ಡಾಕೆಟ್ಟಿನಲ್ಲಿ ಕಂಡ ದರ ವಸೂಲು ಮಾಡಬಹುದೆಂದು ಬರೆದುಬಂದ ಡಿವೀರ್ಜ ಆಫಿಸರವರ 6—8—09ನೆ ಮುಕ್ಕಂ 184ನೆ ನಂಬರು ಯಾದಿ ಓದಲಾಯಿತು.

ಗೌರ್ನಮೆಂಟು ಆರ್ಡರಿನಲ್ಲಿ ನಮೂದುಮಾಡುವ ದರದಂತೆ ಚಂದಾಪುರದ ಸಂತೆಯಲ್ಲೂ ವಸೂಲು ಮಾಡಬಹುದೆಂದು ತೀರ್ಮಾನಿಸಲಾಯಿತು.

17. ಬೆಂಗಳೂರು, ಮಾಗಡಿ, ಹುಲಿಯೂರುದುರ್ಗದ ರಸ್ತೆಯ 7ನೆ ಮೈಲಿಯಲ್ಲಿ ಬೇರೆ ಮಾರ್ಗವನ್ನು ಹಾಕಲು (Deviation) ಬೆಂಗಳೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನೀರವರ 2—8—09ನೆ ಮುಕ್ಕಂ 212ನೆ ಲೆಟರ್ ಒಡನೆ ಬಂದ 2,009 ರೂಪಾಯಿನ ಅಂದಾಜು.

ಈ ಹೊಸರಸ್ತೆಯು (ಪಬ್ಲಿಕ್) ಜನ ಮತ್ತು ಭಂಡಿಗಳ ತಿರುಗಾಟಕ್ಕೆ ಅನುಕೂಲಗಳನ್ನು ಕಲ್ಪಿಸುವ ಉದ್ದಿಶ್ಯ ಅವಶ್ಯಕವೆಂದು ತೀರ್ಮಾನಿಸಲಾಯಿತು. ಆದರೆ ಡಿಸ್ಟ್ರಿಕ್ಟ್ ಫಂಡಿನಿಂದ ಹಣ ಒದಗದ ಸಬಬು ಲೋಕಲ್ ಫಂಡ್ಸ್ ಜನರಲ್ಲಿಂದ ಈ ಅಂದಾಜು ಮಂಜೂರ್ಮಾಡಲು ಗೌರ್ನಮೆಂಟಿಗೆ ಬರಸಬೇಕೆಂದು ತೀರ್ಮಾನಿಸಲಾಯಿತು.

18. ಸ್ಯಾನಿಟೆರಿ ಕಮಿಷರ್ಸರ ಮತ್ತು ಅವರ ಡೆಪ್ಯುಟಿಯವರು ತಮ್ಮತಮ್ಮ ಸಂಚರಣೆ ಕಾಲದಲ್ಲಿ "ಸ್ಯಾನಿಟೆರಿ ಸ್ಟೆಪ್" ಯಾನೆ ಸ್ಯಾನಿಟೆರಿ ಸಿಬ್ಬಂದಿಯನ್ನು ಮತ್ತು "ಎಕ್ವಿಪ್ಮೆಂಟು" ಯಾನೆ ಸಲಕರಣೆಯನ್ನು ಅಜಮಾಯಿಷಿಮಾಡಿ ಗೌರ್ನಮೆಂಟಿಗೆ ರಿಪೋರ್ಟು ಕಳುಹಿಸುವ ಬಾಬೆ ಗೌರ್ನಮೆಂಟಿನಿಂದ ಬಂದ 2—8—09ನೆ ಮುಕ್ಕಂ 1227–35—ಸ್ಯಾ. 190–08–4ನೆ ನಂಬರು ಆರ್ಡರು ಓದಲಾಯಿತು.

ರೆಕಾರ್ಡು ಮಾಡಲಾಯಿತು.

ಡಿಸ್ಟ್ರಿಕ್ಟ್ ಬೋರ್ಡಿನ ಮುಂದಿನ ವಿಾಟಿಂಗ್ ಅಕ್ಟೋಬರ್ ಮಾಹೆ 11ನೆ ತಾರೀಖಿನ ದಿನ ನಡೆಯತಕ್ಕದ್ದೆಂದು ತೀರ್ಮಾನಿಸಲಾಯಿತು.

ಟಿ. ರಾಯಲು ಚೆಟ್ಟಿ,
ಫಾರ್ ಪ್ರೆಸಿಡೆಂಟ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 17ನೆ ಮೊಹೆ ಆಗಸ್ಟು 1909.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಾದಾರರಿಂದ ಸರ್ಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತಿಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೊ ಎಂಬುದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಸೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೆ ಸೆಕ್ಷನ್ ಅನುಸಾರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜು ಮುಲ್ತೂಫ್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜ್ ಖಾಯಂ ಮಾಡಲ್ಪಟ್ಟ ಕೂಡ್ಲೆ ಗ್ರಾಮವು ಆತನ ಸ್ವಾಧೀನ ಮಾಡಲ್ಪಟ್ಟು ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರು ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರಿ ಹರಾಜಿನಿಂದ ನುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 90 ದಿನಗಳೊಳಗಾಗಿ ಗವರ್ನ್‌ಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಜ್ಞೆಗಳು ಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮದ.	ಕಾಯಂಗನುತ್ತಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜು ಹುಟ್ಟುವ ಬೆಳ್ಳಿ ಯಾ ಚೀಟ್ಟಿ.	ನಾಲೆಯವಾನಾ ಸರಕಾರಕ್ಕೆ ಕೊಡಬೇಕಾದ ಕಿಸ್ತ್.	ಯಾವ ಬಾಕೀಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
ಕೋಲಾರ	ಕೋಲಾರ	ನೆಕ್ಕುಲೇರಿ	ಕಾಯಂಗನುತ್ತಾ ಚೆಕ್ಕನಹಳ್ಳಿ	ನೀತಾರಾನುಯ್ಯರ್ ನಗೈರ್‌ರು	ಖುಷ್ಕಿ ... 215 12 ತರಿ ... 5 6 ಬಾಗಾಯಿತು. 1 31 ಪರಂಪೋಕು. 139 39 ಜುಮ್ಲಾ ... 362 8	ರೂ. 332	ಭೂಮಿ ಶಿ. 109 1	ಭೂಮಿ ಶಿ. 110 1	ಕೋಲಾರ ತಾಲ್ಲೂಕು ಚಿಂತಾಮಣಿಯ ನೂಲಾರರಸ್ತೆ ಸ್ರ 1909ನೆ ಅಕ್ಟೋಬರ್ ತಾರೀಖು ನಡೆಸಲ್ಪಡುವುದು.

ಚಕ್ಕುಬಂದಿ.
ಪೂರ್ವಕ್ಕೆ —ಕೀವ್ಯೂರು ಸರಹದ್ದು.
ಪಶ್ಚಿಮಕ್ಕೆ —ತಲಗೊಂದ ಮತ್ತು ಪುರಗ್ರಾಮಗಳ ಸರಹದ್ದು.
ಉತ್ತರಕ್ಕೆ —ಬೈಯಪಲ್ಲಿ ಸರಹದ್ದು.
ದಕ್ಷಿಣಕ್ಕೆ —ಗರುಡನಹಳ್ಳಿ ಸರಹದ್ದು.

ತಾರೀಖು 17ನೆ ಆಗಸ್ಟು 1909.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯೆಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮಿನುಗಳು ಅವ್ವಲ್ ಕ್ರಯದ್ದಾರನ ಖರ್ಚಿನಲ್ಲಿ ವ ನುಕ್ಸಾನ್ನಾಗ್ಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವನು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪದ ಮನುಷ್ಯನಾಗಲೀ ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮ್ಮಾನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖಿಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೆ ಸೆಕ್ಷ್ ಅನುಸಾರವಾಗಿ ಜಾಮೀರ್ ಕೊಟ್ಟಾಗ್ಯೂ ಹರಾಜು ಮುಕೂಫ್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿ, ಹರಾಜ್ ಖಾಯಂ ಮಾಡಲ್ಪಟ್ಟ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರು ಮಾಡೋಣಾದ ಒಂದು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 90 ದಿನಗಳೊಳಗಾಗಿ ಗವರ್ನ್ಮೆಂಟಿಗೆ ಅಪ್ಪೀಲ್‌ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರುಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರಿ	ಅಂದಾಜಾ ಹುಟ್ಟುವಳಿ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾನೆ ಬಾಕಿಗೊಸ್ಕರ ಗ್ರಾಮವನ್ನು ಹರಾಜ್ ಮಾಡಿದ ವ್ಯಾಜ್ಯದಲ್ಲಿ ಅಂತಾ ಸರ್ಕಾರದ ಕಂದಾಯದ ಬಾಕಿ.	ಹರಾಜು ತಾರೀಖು ಮತ್ತು ಸಗ್ಗು.
ಕೋಲಾರ	ಬೌರಿಂಗ್‌ಪೇಟೆ	ಬೇತಮಂಗಲ	ಜೋಡಿ ಬಡವನಾಕನಹಳ್ಳಿ	1. ಡಿ. ರಾಮಪ್ಪನು ೨. ಡಿ. ನಂಕಪ್ಪನು ೩. ಡಿ. ರಾಮಪ್ಪನು ಯಜಮಾನ್ರು.	ಎ. ಗು. ಖುಷ್ಕಿ ... 422 7 ತರಿ ... 25 21 ಬಾಗಾಯಿತು 10 36 ಪರಂಪ್ರೋಕು 705 6 1163 30 ಚಕ್ಕುಬಂದಿ.	ರೂ. ಆ. ಪೈ. 608 14 0	ಜೊ 4 ಇ 7 ರೂ. 265	ರೂ. ಆ. ಪೈ. 850 8 11	ಬೌರಿಂಗ್‌ಪೇಟೆ ತಾಲ್ಲೂಕು ಅನುಬಂಧದ ರೂಬರೂನು ಅಕ್ಟೋಬರ್ ನೆ ತಾರೀಖಿನಲ್ಲಿ

ಪೂರ್ವಕ್ಕೆ —ಗೊಲ್ಲಹಳ್ಳಿ ಮತ್ತು ಐಸಂದ್ರ ಸರಹದ್ದು.
ಪಶ್ಚಿಮಕ್ಕೆ —ಪಟ್ಟಣ ಮತ್ತು ಹುನುಕುಂದ ಗ್ರಾಮಗಳ ಸರಹದ್ದು.
ಉತ್ತರಕ್ಕೆ —ಪಿಚ್ಚಗುಂಟ್ಲಹಳ್ಳಿ ಸರಹದ್ದು.
ದಕ್ಷಿಣಕ್ಕೆ —ಹುನುಕುಂದ ಮತ್ತು ಕದಿರೇಗೌಡನಕೋಟೆ ಸರಹದ್ದು.

ತಾರೀಖು 25ನೆ ಮಾಹೆ ಆಗಸ್ಟು 1909.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಮುರು ಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಜೀರೆಬೀರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಿಚ್ಛೈರೀ ಮೇರೆ ಪೂರಾ ಗ್ರಾಮಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯ ಡಿಪಾಜಿಟ್ ಇಡಬೇಕಾಗಿರುತ್ತ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದಿಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕು ಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಖಡ್ಡಿ ಯಾ ಇತರ ಖರ್ಚುಗಳು ದೇಖಿಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 176ನೆ ಸೆಕ್ಷನ್ ಅನುಸಾರವಾಗಿ ಜಾಮೀರ್ ಕೊಟ್ಟಾಗ್ಯೂ ಹರಾಜು ಮವ್ಕೂಫ್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜ್ ಖಾಯಂ ಮಾಡಲ್ಪಟ್ಟ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರು ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಅಂದಾಜಾ ಬೇಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತು ಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 90 ದಿನಗಳೊಳಗಾಗಿ ಗವರ್ನ್‌ಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು	ತಾಲ್ಲೂಕ	ಹೋಬ್ಳಿ	ಗ್ರಾಮದ ಜೋಡಿದಾರರ ಹೆಸರು	ಅಂದಾಜಾ ಬೇಜವರಿ	ಅಂದಾಜಾ ಹುಟ್ಟುವಳಿ ಯಾ ಬೇರೀಜು	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್	ಯಾವ ಬಾಕಿಗೋಸ್ಕರ ಗ್ರಾಮವನ್ನು ಹರಾಜು ಮಾಡಲ್ಪಟ್ಟಿತೋ ಆ ಬಾಕಿ ಅಂತಾ ಸರಕಾರದವರದ ಬಾಕಿ	ಹರಾಜು ತಾರೀಖು ವಗ್ಗೆರೆ
ಕೋಲಾರ	ಮುಳಬಾಗಿಲ್	ಅನ್ನೆ	ಜೋಡಿ ದೇವರಾಯಸಂದ್ರ ನೆರ್ದಿನಾರಣಪ್ಪ ಮತ್ತು ಇತರರು	ಎ. ಗುಂ. ಖುಷ್ಕಿ ... 384 2 ತರಿ ... 604 31 ಬಾಗಾಯತು ... 10 20 ಪಗಂಪೋಕು 2,882 5 4,133 26	ರೂ. ಆ. ಪೈ. 2624 2 0	ರೂ. 1,451	ರೂ. ಆ. ಪೈ. 297 9 8	ಮುಳಬಾಗಿಲು ಸಬ್ ಡಿವಿಜ಼ನ್ ಸಾಹೇಬರವರ ಮುಂಬಲಕಾಗಿ ಮುಳಬಾಗಿಲ್ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಅಕ್ಟೋಬರ್ 4ನೆ ತಾರೀಖಿನಲ್ಲಿ ನಡಿಯುತ್ತೆ.

ಚಕ್ಕು ಬಂದಿ.
ಪೂರ್ವಕ್ಕೆ—ಜವ್ವನಹಳ್ಳಿ ಮತ್ತು ವರದಗಾನಹಳ್ಳಿ ಸರಹದ್ದು.
ಪಶ್ಚಿಮಕ್ಕೆ—ದೊಡ್ಡಿಗಾನಹಳ್ಳಿ ಮತ್ತು ಕಾಮನೂರು ಸರಹದ್ದು.
ಉತ್ತರಕ್ಕೆ—ಕುರುಬರಹಳ್ಳಿ ಮತ್ತು ಅನಂತಪುರ ಸರಹದ್ದು.
ದಕ್ಷಿಣಕ್ಕೆ—ಕಾಲಹಳ್ಳಿ ಹೊಸಕೆರೆ ಮತ್ತು ಚೋಳಿಂಗಟ್ಟು ಸರಹದ್ದು.

ಎಸ್. ಶ್ಯಾಮಣ್ಣ,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 16ನೆ ಆಗಸ್ಟು 1909.

ಪೈರ್ಜರಾಕ್ಟ್ ಸಬ್ ತಾಲ್ಲೂಕು ವೇಲ್ಕೋಟೆ ಹೋಬಳಿಗೆ ಸೇರಿದ ಜೋಡಿ ರಾಮಪುರ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಪೈರ್ಜರಾಕ್ಟ್ ಸಬ್ ತಾಲ್ಲೂಕು ಕಛೇರಿಯಲ್ಲಿ 1909ನೆ ಸೆಪ್ಟಂಬರ್ ಮಾಹೆ 30ನೆ ತಾರೀಖು ದಿವಸ ಬಹಿರಂಗವಾಗಿ ಹರಾಜ್ ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಆಗಸ್ಟು 26ನೆ ಮೆರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 698ನೆ ನಂಬರು ಪೇಜು ನೋಡತಕ್ಕದ್ದು.

ಎಸ್. ವೆಂಕಟರಂಗಂ,
ಫಾರ್ ಡೆಪ್ಯುಟಿ ಕಮಿಷನರ್.

ತಾರೀಖು 28ನೆ ಆಗಸ್ಟು 1909.

ಸ್ಥಿರಸ್ವತ್ತಿನ ಹರಾಜಿಗೆ ಒಗ್ಗೆ ಕೂಡಿಸಲ್ಪಟ್ಟ ಇಸ್ತಿಹಾರಿನ ಪ್ರಸಿದ್ಧಪತ್ರಿಕೆ

1. ಕಂದಾಯದ ಬಾಕೀದಾರರಾದ ಮೈಸೂರಿನಲ್ಲಿರುವ ಮಿ|| ಬಾದಾಮಿ ಭೀಮರಾಯರಿಂದ ಬರಬೇಕಾದ ಜಮಾಬಂ ಕಂದಾಯದ ಬಾಕೀಗಾಗಿ ಸರಕಾರಕ್ಕೆ ಫಾರ್‌ಫೀಚರವಾಡಿಕೊಳ್ಳಲ್ಪಟ್ಟ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟ್ ಮೈಸೂರು ತಾಲ್ಲೂಕು ಕಳಲೇಂಬಳಿ 1909ನೆ ಆಕ್ಟೋಬರ್ 18ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಬಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1909ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬ ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪಕೀಲ್ ವೇರಿಗೆ ರೂಪಾಯಿ 686-13-4 ಆಗಿರುತ್ತೆ.

3. ಹರಾಜು ಕಾಲದಲ್ಲಿ ಪರಾಜಿದಾರನು ಹರಾಜ್ ಮೊಬಲಗಿನ ಕೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಆದರಿಂದ ಉಂಟಾಗಬಹುದಾದ ನಷ್ಟ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಪರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವ ನಿರ್ವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಿರುವ ಪೂರಾ ಕಂದಾಯದ ಹಣವನ್ನೂ, ಖರ್ಚು ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿ ಲ್ಪಡುತ್ತೆ.

6. ಹರಾಜು ಡಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾ ಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿದ ಮೇಲೆ ಡಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟು ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡಿಪ್ಟಿ ಕಮಿಷನರವರಿಂದ ಸೇಲ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ವಲ್ಪಲಿತ್ಯಗಳಿಗೆ ಪರ್ಚೇಸರ್ ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸ ಳಲ್ಲಿ ಡಿಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ಮ್ಯಾಸೂರು ವಾರು ಹೋಬಳಿ.	ಗ್ರಾಮ.	ಜೋಡಿ ಹೊಸಪಟ್ಟಿ ಖಾನಾಂದಾರ್ ಮಿ|| ಬಾದಾಮಿ ಭೀಮರಾಯರು.	ಬಾಕೀದಾರರ ಹೆಸರು.	ಕಟ್ಟುಪಡಗಳು. ಕಟ್ಟುಪದ ಹೆಸರು.	ಅಂದಾಜು ಕಿಸ್ತೆಲ್ಲಿ.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು	ಖುಷ್ಕಿ, ತರೀ ಯಾ ಬಾಗಾಯತು.	ವಿಸ್ತೀರ್ಣ.	ಆಕಾರ.	ಅಂದಾಜು ಕಿಮ್ಮತ್ತು.	ಸರ್ಕಾರಕ್ಕೆ ಸಲಿಯಬೇಕಾದ ಕಂದಾಯ.	ಸರ್ಕಾರಕ್ಕೆ ಬರಬೇಕಾದ ಸೆಸ್ ಫೀ ಮತ್ತು ಸಹಿತವಾದ ಬಾಕಿ ಮೊಬಲಗು.
								ಎ. ಗು.	ರೂ. ಆ.		
							ಪರಂಪೋಕು.	403 10	12 0		
							ಖುಷ್ಕಿ ...	687 39	561 15		
							ತರಿ ...	2 29	92 4		
							ಬಾಗಾಯಿತು	41 13	152 4		
							ಜಮ್ಮಾ ...	1154 11	818 7	ರೂ. 3,000	ರೂ. ಅ. ಪೈ. ಜೋಡಿ 632 0 0	ರೂ. ಅ. ಪೈ. ಡಿಸ್ಟ್ರಿ 1 8 0 ಪ್ಲೈನ್ 0

ಕೆ. ಚಾಂಡಿ,
ಅಫೀಷಿಯೇಟಿಂಗ್ ಡಪ್ಯುಟಿ ಕಮಿಷನರ್.